*ಹಾಡ್ಯ, ಜಯಾನಂದ, ಮೈಸೂರು*
*ಉತ್ತರಗಳಲ್ಲಿ ಬಹುಪಾಲು ಮಹಿಳಾಪರ ವಾಗಿರುತ್ತವಲ್ಲ, ಏನು/ಯಾರು ಕಾರಣ?*



ಹೈ ಕಮಾಂಡ್ ಪರವಾಗಿರುವುದು ಕೈಯಾರ ಬೆಳೆಸಿರುವ ಪರಂಪರೆ ಸಾರ್!

*ಬಿಂಡಿಗನವಲೆ ರಂಗರಾಜು, ಬೆಂಗಳೂರು*
*ಹೆಣ್ಣು ಸಂಸಾರದ ಕಣ್ಣು; ಗಂಡು?*
ಕಣ್ಣು ಏರಿಸಿದರೆ ಏರುವ, ಇಳಿಸಿದರೆ ಇಳಿಯುವ ಹುಬ್ಬು!

*ಎಂ.ಎಸ್. ಗುರುರಾಜಾಚಾರು, ಬಳ್ಳಾರಿ*
*ವೈಟ್ ಮನಿ, ಬ್ಲ್ಯಾಕ್ ಮನಿಗಳ ನಿಜವಾದ ಅರ್ಥವೇನು?*
ಕೆಲಸ ಮಾಡಿ wait ಮಾಡಿ ಪಡೆಯುವುದು ವೈಟ್ ಮನಿ, ಕೆಲಸವನ್ನೇ block ಮಾಡಿ ಪಡೆಯುವುದು ಬ್ಲ್ಯಾಕ್ ಮನಿ.

*ಕಡ್ಡಿ ಬಿ ಗಿರಿಜ, ಮುಂಡರಗಿ*
*ಗಾಡಿ ಹಿಂದೆ ಹೋದರೆ ಧೂಳು, ಹುಡುಗಿಯ ಹಿಂದೆ ಹೋದರೆ ಗೋಳು, ರಾಜಕಾರಣಿಯ ಹಿಂದೆ ಹೋದರೆ?*
ಗಾಡಿ, ಹುಡುಗಿ, ನಾನು, ನೀವು ಎಲ್ಲಾ ಹಾಳು!

*ಎನ್.ವಿ. ಶ್ರೀನಿವಾಸ್, ಮೈಸೂರು*
*32 ಹಲ್ಲುಗಳನ್ನು ಉದುರಿಸಿಬಿಡುತ್ತೇನೆ ಎಂದು ಬೆದರಿಸುತ್ತಾರೆ; ಅಷ್ಟೊಂದು ಹಲ್ಲುಗಳಿಲ್ಲದಿದ್ದರೆ?!*



ಜಗಳ ಬಿಡಿಸಬಂದವರ ಹಲ್ಲುಗಳನ್ನುದುರಿಸಿ ಲೆಕ್ಕ ಚುಕ್ತಾ ಮಾಡಿಕೊಳ್ಳುತ್ತಾರೆ!

*ಹ.ಕೌ. ಅಪೂರ್, ಬನ್ನೂರು*
*ಪ್ರಶ್ನೆಪತ್ರಿಕೆಯಲ್ಲಿ ಬಿಟ್ಟ ಸ್ಥಳ ತುಂಬಿರಿ ಎಂಬ ಜಾಗದಲ್ಲಿ ತನ್ನ ಲವರ್ ಹೆಸರು ಬರೆದಿದ್ದಾನಂತೆ; ಮುಂದೆ ಫಲಿತಾಂಶ?*
ಪಾಸ್ ಆಗುತ್ತಾನೆ– ಪ್ರೇಮಪರೀಕ್ಷೆಯಲ್ಲಿ!

*ಆರ್. ಮಧುಸೂದನ್, ಹಾಸನ*
*ತಾಸುಗಟ್ಟಲೆ ಅಲಂಕಾರ ಮಾಡಿಕೊಳ್ಳುವ ಹೆಣ್ಣಿನ ಮೇಲೆ ಕನ್ನಡಿಗೆ ಬೇಸರವಾಗುವುದಿಲ್ಲವೇ?*
ಆದರೂ ಏನು ಮಾಡಲಾದೀತು ಪಾಪ, ಕನ್ನಡಿಗೆ ನಡಿಗೆ ಇಲ್ಲವಲ್ಲಾ...!

*ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.*
*ನನ್ನ ಮಗ ವಿದ್ಯಾವಂತ ಹಾಗೂ ಬುದ್ಧಿವಂತನಾಗಿದ್ದರೂ ಸುಳ್ಳು ಹೇಳುವುದನ್ನು ಕಲಿತಿಲ್ಲ. ಮುಂದೆ ಇವನ ಭವಿಷ್ಯ ಹೇಗೆ?*
ಶೀಘ್ರವೇ ಯಾವುದಾದರೂ ಲಾಯರ್ ಬಳಿ ಕೆಲಸಕ್ಕೆ ಕಳುಹಿಸಿ, ಒಂದೇ ತಿಂಗಳಲ್ಲಿ ದಾರಿಗೆ ಬರುತ್ತಾನೆ!

*ರವಿ ಎಂ. ಪೈ, ಹೊನ್ನಾವರ*
*ಒಬ್ಬರನ್ನು ಸೋಲಿಸುವುದು ಸುಲಭ; ಆದರೆ, ಗೆಲ್ಲುವುದು ಕಷ್ಟ, ಏಕೆ?*
ಸೋಲಿಸಲು ಬಲ ಇದ್ದರೆ ಸಾಕು, ಗೆಲ್ಲಲು ಮಾನವೀಯತೆ ಬೇಕು!

*ಶಿವರಾಜ್ ಕೆ. ವಿಭೂತಿ, ಹರಿಹರ*
*ಹೆಚ್ಚಾಗಿ ಲಕ್ಷ್ಮಿ-ಸರಸ್ವತಿಯರು ಒಟ್ಟಾಗಿ ಇರುವುದಿಲ್ಲವಂತೆ, ಹೌದಾ ಅಂಕಲ್?*
ನಿಜ; ಗಂಡ ಹೆಂಡತಿಯ ಹೊರತಾಗಿ ದೇವತೆಗಳು ಡಬಲ್ ರೈಡಿಂಗ್ ಹೋಗುವುದಿಲ್ಲ!

*ಎಚ್.ಆರ್. ದೇಸಾಯಿ, ರಾಯಚೂರು*
*ವಿಧುರ, ವಿಧವೆ ಮದುವೆ ಆದರೆ ಸಮಾಜ ಓ.ಕೆ. ಮುದ್ರೆ ಒತ್ತುತ್ತಾ?*
ಏಕಾಗಬಾರದು, ಈಗ ಆ ವಿಧವೂ ಸರಿಯಾದ ವಿಧವೆ!

*ಮನೋರಮಾ ಪ್ರಭು, ಕಾಸರಕೋಡ*
*ಪ್ಲಾಸ್ಟಿಕ್ ನಿಷೇಧ ಸಂಪೂರ್ಣ ಸಾಧ್ಯವೆ?*
ಪ್ಲಾಸ್ಟಿಕ್ ಸರ್ಜರಿ ಇರುವವರೆಗೆ ಸಾಧ್ಯವಿಲ್ಲ!

*ಮಲ್ಲಿಕಾರ್ಜುನ ಹ. ಬಗಲಿ, ಸಾಂಗಲಿ*
*ಬಲಾಢ್ಯವಾದ ಸಿಂಹಕ್ಕೆ ಬಲೆ ಬೀಸುವವರೇ ಸೊಳ್ಳೆಗೆ ಹೆದರಿ ಬಲೆಯೊಳಗೆ ಸೇರುವುದೇಕೆ?*
ದೊಡ್ಡವರನ್ನು ಎದುರಿಸಿ ನಿಲ್ಲಬಹುದು, ಆದರೆ ಸಣ್ಣವರ ಕಿರಿಕಿರಿ ತಡೆದುಕೊಳ್ಳುವುದು ಬಲು ಕಷ್ಟ!

*ನೆ.ಲ.ರಾಂ, ಬೆಂಗಳೂರು*
*ಸಂಶಯ ಪಿಶಾಚಿಗಳನ್ನು ಓಡಿಸುವ ಬಗೆ ಹೇಗೆ ಸಾರ್?*
ಏನೋ ಡೌಟು! ಎಂದುಬಿಡಿ, ಅವರು ಕಂಡುಹಿಡಿಯಲೇ ಬೇಕು ಎನ್ನುತ್ತಾ ಓಡುತ್ತಲೇ ಇರುತ್ತಾರೆ!

## ಬಹುಮಾನಿತ ಪ್ರಶ್ನೆ

*ಎಂ.ಎಸ್. ಮಂಜರ್, ಬಂಡಳ್ಳಿ, ಕೊಳ್ಳೇಗಾಲ*
*ಕಾನೂನು ಯಾವ ಜಾತಿ?*
ಒಂದು ನಿರ್ಧಾರಕ್ಕೆ ಬರಲು ವರ್ಷಗಟ್ಟಲೆ ತೆಗೆದುಕೊಳ್ಳುವುದರಿಂದ – ಹೆಣ್ಣು ಜಾತಿ!

*ಎಂ.ಎಸ್. ಧರ್ಮೇಂದ್ರ, ಜಿ.ಟಿ.ಆರ್.ಇ. ಕ್ಯಾಂಪಸ್*
*ಹಿಂದಿನ ಮೈ ತುಂಬ ಬಟ್ಟೆ ತೊಟ್ಟ ಹೆಂಗಸರಿಗೂ, ಇಂದಿನ ಮೈ ತುಂಬಾ ಬಿಟ್ಟು ಬಟ್ಟೆ ತೊಟ್ಟ ಆಂಟಿಯರಿಗೂ ಏನು ವ್ಯತ್ಯಾಸ?*
ಅವರಿಗೆ ಧ್ಯಾನು ಮುಖ್ಯ, ಇವರಿಗೆ ತನು ಮುಖ್ಯ!

*ಮಹಾವೀರ ಕಾಸಾರ, ಚನ್ನಗಿರಿ*
*ಕನಸಿನ ರಾಣಿ, ಕಲ್ಪನೆಯ ಕೂಸು ಇರುವಾಗ ಮದುವೆ ಏಕೆ?*
ಕಠೋರ ಸತ್ಯಗಳ ಅರಿವಾಗಲು!

*ಮೊಳಕಾಲ್ಮೂರು ಸುರೇಶ, ಬಳ್ಳಾರಿ*
*ಅಲ್ರಣ್ಣಾ, ರಿಯಾಲಿಟಿ ಷೋ ಎಂದರೆ ಕನ್ನಡದಲ್ಲಿ ಅರ್ಥವೇನಣ್ಣಾ?*



ಬುರುಡೆ ಪುರಾಣ!

*ಹೆಚ್.ಆರ್. ಕಡಿವಾಲ, ಬದಾಮಿ*
*ದೇವರು ಹೆಣ್ಣು ಹುಟ್ಟಿಸದಿದ್ದರೆ ಏನಾಗುತ್ತಿತ್ತು?*
ಗಂಡಿಗೆ ಕಷ್ಟಗಳೇ ತಿಳಿಯದೆ, ದೇವರನ್ನು ನೆನೆಯದೆ, ದೇವರಿಗೆ ಹರಕೆ, ನೈವೇದ್ಯ ಲಾಸ್ ಆಗುತ್ತಿತ್ತು!

*ಮುರಲೀಧರ ಕುಲಕರ್ಣಿ, ಬೀದರ್*
*ಸೃಷ್ಟಿಕರ್ತನಾದ ಬ್ರಹ್ಮನಿಗೆ ಮಕ್ಕಳಿಲ್ಲವಲ್ಲಾ, ಏಕೆ?*
ತನ್ನ ಹಣೆಯ ಬರಹದಲ್ಲಿ ಮಕ್ಕಳ ಭಾಗ್ಯವನ್ನು ಬರೆದುಕೊಳ್ಳುವುದನ್ನು ಮರೆತುಬಿಟ್ಟನಂತೆ!

■ ರಾಮ್